ಆಕೆ ಮತ್ತೆ ಮನೆಗೆ ಮರಳಿ ಬಂದಾಗ, ಅವಳ ಹೆಜ್ಜೆಗಳು ಸೋಲುತ್ತಿದ್ದವು. ಹೊಟ್ಟೆಯಲ್ಲಿ ಅಪಾರ ಸಂಕಟವೆನಿಸಿ ಅವಳಿಗೆ ಕುಸಿದು ಬೀಳುವಂತಾಗಿತ್ತು. ಅವಳು ಮನೆಯ ಮುಂಬಾಗಿಲ ಬಳಿಯಲ್ಲಿ ಬರುವಷ್ಟರಲ್ಲಿ ಅವಳ ಪ್ರಾಣವೆಲ್ಲಾ ಸೋರಿ ಹೋಗಿತ್ತು. ಆದರೂ ಸಾವರಿಸಿಕೊಂಡು ಅವಳು ಮುಂಬಾಗಿಲ ಬಳಿ ಇದ್ದ ಬೆಲ್ಲನ್ನು ಒತ್ತಿದಳು. ಅವಳ ಮನೆಯ ಬೆಲ್ ರಿಂಗಣಗೊಳ್ಳುತ್ತಿರಲಿಲ್ಲ ಬದಲಿಗೆ, 'ಸಾಜನ್ ಸಾಜನ್' ಎಂದು ಹಾಡುತ್ತಿತ್ತು. ಇಂದು ಕೂಡ ಅದು ಹಾಡಿತು. ಆದರೆ ಬಾಗಿಲು ತೆರೆಯಲಿಲ್ಲ. ಬದಲಿಗೆ ನೀರವತೆ ಆವರಿಸಿತ್ತು. ಅವಳು ಕಿವಿಯಾನಿಸಿ ಮೆಲು ಹೆಜ್ಜೆಗಳ ಸಂಚಲನವನ್ನು ನಿರೀಕ್ಷಿಸಿದಳು. ಆದರೆ ಒಳಗಿನಿಂದ ಯಾವುದೇ ಧ್ವನಿ ಕೇಳಿ ಬರಲಿಲ್ಲ. ಅವಳು ಒಂದೆರಡು ನಿಮಿಷ ಕಾದಳು. ನಂತರ ಮತ್ತೊಮ್ಮೆ ಬೆಲ್ಲನ್ನು ಒತ್ತಿದಳು ಮತ್ತೆ ಅದೇ ಮೌನದ ಪ್ರತಿಕ್ರಿಯೆ. ಅವಳ ಎದೆ ಡವಡವನೆ ಬಡಿದು ಕೊಳ್ಳಲಾರಂಭಿಸಿತು. ತಾನು ಊಹಿಸದ, ನಿರೀಕ್ಷಿಸದ ದುರಂತವೇನೋ ನಡೆದು ಹೋಗಿರಬಹುದು ಎಂಬ ಆತಂಕದ ಅಲೆಯೊಂದು ಅವಳ ಮನದ ಮೂಲೆಯಿಂದ ಹಾದುಹೋಯಿತು. ಅವಳ ಹೆಜ್ಜೆಗಳು ಅಸ್ಥಿರವಾದವು. ಆದರೆ ಅವಳ ಬಲಗೈಯ ತೋರು ಬೆರಳಿಗೆ ಅಪಾರ ಶಕ್ತಿ ಬಂದು ಕೂಡಿತು. ಅವಳು ಬಲವಾಗಿ ಒತ್ತಿ ಮತ್ತೊಮ್ಮೆ ಸುಕೋಮಲ ಪಾದಗಳ ಮೆಲು ಹೆಜ್ಜೆಯ ನಾಜೂಕು ಸ್ಪರ್ಶವನ್ನು ಆಲಿಸಲು ಮೈಯೆಲ್ಲಾ ಕಿವಿಯಾದಳು. ಇದೀಗ ಬಾಗಿಲು ತೆರೆಯಿತು ಎಂಬ ಭ್ರಮೆಯಿಂದ ಆಕೆ ಪುಟಿದೆದ್ದ ಉತ್ಸಾಹದಿಂದ ಬಾಗಿಲನ್ನು ದೂಡಿದಳು. ಬಾಗಿಲು ತೆರೆಯಲಿಲ್ಲ. ಅವಳೂ ಕೂಡ ಬಿಡಲಿಲ್ಲ. ತಾಯಿಯಲ್ಲವೆ? ಬಿಡಲು ಸಾಧ್ಯವೇ? ಅವಳ ಮೈಯೆಲ್ಲಾ ಬೆವರಿನಿಂದ ತೊಯ್ದು ಹೋಯಿತು. ಅವಳು ಬೆಲ್ಲನ್ನು ಒತ್ತುವುದನ್ನು ಬಿಟ್ಟು ದಬದಬನೆ ಬಾಗಿಲನ್ನು ಬಡಿಯ ತೊಡಗಿದಳು. ಅಸ್ಪಷ್ಟ ಶಂಕೆಯೊಂದು ಕತ್ತಲ ಗರ್ಭದಿಂದ ಮೂಡಿ ಬಂದು ಅನಾಹತವಾಗಿ ಅವಳನ್ನು ಆವರಿಸಿ ಕೊಂಡಂತೆ, ಅವಳ ಇಡೀ ಅಸ್ತಿತ್ವವನ್ನು ಉಸಿರು ಕಟ್ಟಿಸಿದಂತೆ ಅವಳು ವಿಹ್ವಲಳಾದಳು.

ಅಚಾನಕ್ ಆಗಿ ಅವಳು ಹಿಂದೆ ತಿರುಗಿ ನೋಡಿ, ''ಬಶೀರ್... ಬಶೀರ್'' ಎಂದು ಏರುಧ್ವನಿಯಲ್ಲಿ ವಿಕಾರವಾಗಿ ಕಿರುಚಿದಳು. ''ಏನು ಚಿಕ್ಕಮ್ಮ?'' ಎಂದು ಪ್ರಶ್ನಿಸುತ್ತಾ ಧಾವಿಸಿ ಬಂದ ಅವನತ್ತ ನೋಡಿ ಬಾಗಿಲತ್ತ ಕೈ ತೋರಿಸುತ್ತಾ ಅವಳು ಕನಲಿದಳು ಮತ್ತು ಹರಕು ಮುರುಕಾಗಿ, ''ಬಾಗಿಲು ತೆಗೆಯುತ್ತಿಲ್ಲ'' ಎಂದು ಹೇಳಿದವಳೇ ಪ್ರಜ್ಞೆ ತಪ್ಪಿದಳು.

ಪ್ರಜ್ಞೆ ಯಾಕೆ ಬಂತೋ ಎಂದು ಅವಳು ಎದೆ ಬಡಿದುಕೊಂಡು ಅತ್ತಳು. ಒಂದೇ ಕ್ಷಣದಲ್ಲಿ ತುಂಬಿದ ಜನ ಸಂದಣಿಯ ನಡುವೆ ಯಾರೋ ಅವಳನ್ನು ಹಿಡಿದೆತ್ತಿ ವರಾಂಡದಲ್ಲಿದ್ದ ಕುರ್ಚಿಯ ಮೇಲೆ ಕೂರಿಸಿದರು. ಅವಳಿಗೆ ಅಪಾರ ನಡುಕ ಬಂದು ಅವಳ ಸಮಸ್ತ ಇಂದ್ರಿಯಗಳು ಸ್ತಬ್ಧವಾದವು. ಕಣ್ಣು ತೆರೆದಿದ್ದರೂ ಅವಳು ಯಾವ ದೃಶ್ಯವನ್ನು ಕೂಡ ಕಾಣುತ್ತಿರಲಿಲ್ಲ. ಅಲ್ಲಿದ್ದ ಜನರೆಲ್ಲರೂ ಮಾರುಕಟ್ಟೆ ಪ್ರದೇಶವೇನೊ ಎಂಬಂತೆ ಒಬ್ಬರ ಮೇಲೆ ಒಬ್ಬರು ಬಿದ್ದು ಅವಳ ಮನೆಯೊಳಗೆ ಓಡುತ್ತಿದ್ದರು. ಏನಾಗುತ್ತಿದೆ ಎಂಬ ಪರಿವೆ ಇಲ್ಲದೇ ಅವಳು ಕುಳಿತಿದ್ದಳು. ಒಂದು ಒಂದು ಮಾತು ಅವಳ ಕಿವಿಯ ಮೇಲೆ ಅಪ್ಪಳಿಸುತ್ತಿತ್ತು, ''ಚಾಕು ತನ್ನಿ ಬೇಗ ಬೇಗ'' ಎಂದು ಒಬ್ಬನ ಧ್ವನಿ, ''ಮೈ ಬೆಚ್ಚಗಿದೆ, ಇನ್ನು ಕುಟುಕು ಜೀವ ಉಳಿದಿದೆಯೇನೋ'' ಎಂಬ ಇನ್ನೊಂದು ಧ್ವನಿ, ''ಓ ಇಳಿಸಿ ಇಳಿಸಿ ತಂದು ಇಲ್ಲಿ ಮಲಗಿಸಿ'' ಅಷ್ಟರಲ್ಲೇ ಜನರ ಮಾತಿನ ಗದ್ದಲದಲ್ಲಿ ಏನೂ ಕೇಳಿಸದಂತಾಗಿತ್ತು.

ಯಾರೋ ಒಬ್ಬ ಕೇಳುತ್ತಿದ್ದ, ''ಎಲ್ಲಿ ಮಲಗಿಸಬೇಕು ಈ ಮೈಯತನ್ನು(ಶವವನ್ನು)?'' ಅಷ್ಟರಲ್ಲೇ ಬಾಗಿಲ ಬಳಿ ಇದ್ದ ಜನರನ್ನು ದೂಡಿಕೊಂಡು ಮೂರ್ನಾಲ್ಕು ಜನ ಒಳ ಬಂದರು. ಅವರ ನಡುವೆ ಮೆಹೆಕ್‌ಳ ಅಪ್ಪನೂ ಇದ್ದ. ಅವನು ದೊಪ್ಪನೇ ಕುರ್ಚಿಯ ಮೇಲೆ ಕುಸಿದು ಕುಳಿತು ಬಿಕ್ಕಿ ಬಿಕ್ಕಿ ಅಳತೊಡಗಿದ. ಅವಳಿಗೆ ಒಳಗೇ ನಗು ಬಂತು, 'ಅಯ್ಯೋ ನೋಡಿಲ್ಲಿ ಎಂಥಾ ಗಂಡಸು! ಅಳುತಾ